

ಎಡದಿಂದ ಬಲಕ್ಕೆ:

1. ಹೊಸದಾದ ಈ ಮಹತ್ವದ ತೀರ್ಮಾನಕ್ಕೆ ಎಲ್ಲರ ಒಪ್ಪಿಗೆ ಇದೆ 4
3. ಹಸಿಯಾಗಿದೆಯೆಂದು ಹಿಂದು ಮುಂದಾಗಿ ಹರಡಿದ ಶಯ್ಯೆ 3
4. ಹಾಗೆ ಸುಮ್ಮನಿರಬಾರದು; ಮೊದಲು ವಂದನೆ ಮಾಡು 3
6. ಕೆಟ್ಟ ವ್ಯಾಯಾಮ ಶಾಲೆಯ ಕೆಲಸ; ಅದೊಂದು ನರಕ 4
7. ನೂರಾರು ತರಹದ ಕೆಲಸ; ಎಡೆಬಿಡುವಂತೆಯೂ ಇಲ್ಲ 4
8. ಬಾಲಕರನ್ನೆಲ್ಲ ಕರೆಸಿದ್ದು ಆದಾಯ ಕೈ ಸೇರುವಂತಾಯಿತು 4
10. ಆ ದೇಗುಲದ ಪ್ರಸಾದ ಒಳ್ಳೇ ವಿಖ್ಯಾತ 4
12. ತರೀಕೆರೆಯಿಂದ ತರಿಸಿದ್ದು ಇಷ್ಟೂ ಕಾಯಿಪಲ್ಲೆ 4
14. ಕೆಟ್ಟ ವಿಚಾರವೇನಿಲ್ಲ; ಮನಸ್ಸಿಲ್ಲದೆ ಮಾಡಿದ ಕೆಲಸ, ಅಷ್ಟೆ 4
16. ನಟರಾಜನ ಪೂಜೆ ನಡೆವಾಗ ಏನೀ ಸದ್ದು, ಗಲಾಟೆ? 3
17. ಮಾರುದ್ದ ಮಾತಾಡಿದರೂ ಧ್ವನಿ ಮಾತ್ರ ತುಂಬ ಸಿಹಿ 3
18. ರಾಣೀ ಜನರನ್ನು ಕಾಣುವಾಗ ಒಯ್ಯಲೇಬೇಕು ಗೌರವ ಕಾಣಿಕೆ 4

ಮೇಲಿಂದ ಕೆಳಕ್ಕೆ:

1. ಹಾಸಿಗೆಯನ್ನು ಹರಡಲೂ ನೆರವು ನೀಡಬೇಕೇ? 3
2. ಇರಲೇಬೇಕು, ಎಲ್ಲ ಕಥಾನಕಗಳೂ ಮುಗಿವವರೆಗೂ 3
3. ತನಯನ ಜೊತೆಗೆ ಎಂಥ ಒಳ್ಳೇ ಸ್ನೇಹ! 4
5. ಸಂಬಳವಿಲ್ಲದ ಕೆಲಸ; ಅದಕ್ಕೇ ಕಷ್ಟ ಇಲ್ಲ 3
7. ಧ್ಯಾನ ಮಾಡಿಸುವ ವೇಗವನ್ನು ಕಡಿಮೆ ಮಾಡು 4
9. ಹೊರದೇಶದವರಿಗೆ ಒಳಬರಲು ಅಪ್ಪಣೆ ಚೀಟಿ ಬೇಕು 4
11. ತಾರಸಿಯ ಮೇಲೆ ಕುಳಿತು ನುಡಿಸಿದ್ದುಅದಾವ ತಂತೀ ವಾದ್ಯ? 3
13. ಆ ತರಹದ ಆಯುಧವನ್ನು ಕಂಡೊಡನೆಯೇ ಗಡಗಡ! 4
14. ಕಣ್ಣಿನಿಂದ ಕಾಣಬಲ್ಲಷ್ಟೂ ದೂರ ಹರಡಿದೆ ದಟ್ಟಡವಿ 3
15. ಮಾರಣ ಹೋಮಕ್ಕೆ ಕಾರಣವಾದಳು ಇದೇ ಸುಂದರಿ 3

---

### 09—07—2020 ಉತ್ತರಗಳು

ಎಡದಿಂದ ಬಲಕ್ಕೆ:
1.ಅಸದೃಶ 3. ಸಮೀಪ 4. ರಕ್ಷಿಸು 6. ಪರಿವಾರ 7. ಗರಿಮುರಿ 9. ರಮಾಕಾಂತ 12. ಅನುಕೂಲ 14. ಕಲಹ 15. ಕಾದಾಟ 16. ದಿನಕರ

ಮೇಲಿಂದ ಕೆಳಕ್ಕೆ:
1. ಅಪಹಾರ 2. ಶರವೇಗ 3. ಸವಾರಿ 5. 'ಸುನಿಮು' (ಮುನಿಸು ಬುಡಮೇಲು) 6. ಪರಿಕರ 8. ರಿಪುಬಲ 10. ಮಾರಕ 11. ತಳಹದಿ 12. ಅಪಕಾರ 13. ಕೂಗಾಟ

ಪ್ರಶ್ನಾಂಕಣ

# ಶಾರ್ಕ್‌ಗಳಿಗೆ ಬೆಂಗಾವಲು ಏಕೆ?

ಕಡಲಲ್ಲಿ ಇದೊಂದು ಸರ್ವೇಸಾಮಾನ್ಯವಾದ ಆದರೆ ಪರಮ ಸೋಜಿಗದ ದೃಶ್ಯ: ಬೃಹದಾಕಾರದ, ಬಲಿಷ್ಠ, ಉಗ್ರ ಬೇಟೆಗಾರರಾದ ಶಾರ್ಕ್‌ಗಳ ಜೊತೆ ಜೊತೆಗೇ ಅವುಗಳ ಅತ್ಯಂತ ಸನಿಹದಲ್ಲೇ ಅಥವಾ ಅವುಗಳ ಶರೀರಕ್ಕೆ ಅಂಟಿದಂತೆಯೇ ಹತ್ತಾರು ಚಿಕ್ಕ ಮೀನುಗಳು ಎಡೆಬಿಡದೆ ಸಾಗುತ್ತಿರುತ್ತವೆ (ಚಿತ್ರ ನೋಡಿ). 'ಬೆಂಗಾವಲು ಭಟ' ರಂತೆ ಶಾರ್ಕ್‌ಗಳ ಬೆನ್ನುಹತ್ತುವ ಈ ಮತ್ಸ್ಯಗಳು ಯಾವ ಆತಂಕವೂ ಇಲ್ಲದೆ ಭಯಂಕರ ಶಾರ್ಕ್‌ಗಳ ತೆರೆದ ಬಾಯೊಳಕ್ಕೂ ಹೋಗುತ್ತ, ಕ್ಷೇಮವಾಗಿಯೇ ಹೊರಬರುತ್ತಲೂ ಇರುತ್ತವೆ! ಇದೆಂಥ ವಿಸ್ಮಯ! ಬಲಾಢ್ಯ ಶಾರ್ಕ್‌ಗಳಿಗೆ ಇಂಥ ಮೀನುಗಳ ಬೆಂಗಾವಲು ಏಕೆ?

ವಾಸ್ತವ ಏನೆಂದರೆ, ಶಾರ್ಕ್‌ಗಳು ಮತ್ತು ಈ ಬೆಂಗಾವಲು ಮತ್ಸ್ಯಗಳದು ಪರಸ್ಪರ ಅವಲಂಬನೆಯ, ಪರಸ್ಪರ ಸಹಾಯದ ಲಾಭದಾಯಕ ಸಂಬಂಧ! ಹೇಗೆಂದು ನೀವೇ ನೋಡಿ:

ಮತ್ಸ್ಯ ಲೋಕದಲ್ಲಿ ಇತರ ಪ್ರಾಣಿಗಳ ಶರೀರವನ್ನು ಸ್ವಚ್ಛಗೊಳಿಸಿ ತಾವೂ ಲಾಭಗಳಿಸುವ ವಿಶಿಷ್ಟ ಮತ್ಸ್ಯ ಪ್ರಭೇದಗಳು (ಕ್ಲೀನರ್ ಫಿಶ್) ಹಲವಾರಿವೆ: ರಾಸ್, ರೆಮೋರಾ, ಗೋಬಿ, ಚಿಕ್ಲಿಡ್, ಗೆಡ್ಡೆ ಮೀನು, ಕೊಳವೆ ಮೀನು, ಪೈಲಟ್ ಮೀನು ಇತ್ಯಾದಿ. ಈ ಗುಂಪಿನ ರೆಮೋರಾ ( ಚಿತ್ರ 1, 3) ಮತ್ತು ಪೈಲಟ್ ಮೀನು (ಚಿತ್ರ 2) ಗಳು ಶಾರ್ಕ್‌ಗಳನ್ನು ಆಯ್ದುಕೊಂಡಿವೆ.

ಶಾರ್ಕ್‌ಗಳಿಗಿಂತ ತುಂಬ ಚಿಕ್ಕ ಗಾತ್ರದ ಈ ಮೀನುಗಳ ಒಂದೊಂದು ಗುಂಪು ಒಂದೊಂದು ಶಾರ್ಕ್‌ನ ಬೆನ್ನು ಹತ್ತುತ್ತವೆ. ಶಾರ್ಕ್‌ಗಳ ಜೊತೆ ಜೊತೆಗೇ ಇರುತ್ತ, ಸಾಗುತ್ತ ಅದರ ಶರೀರಕ್ಕೆ ನೋವಾಗಲೀ ಗಾಯವಾಗಲೀ ಆಗದಂತೆ ಅದರ ಚರ್ಮದ ಮೇಲೆ ನೆಲೆ ಹಿಡಿದ




ಉಪದ್ರವಕಾರಕ ಮತ್ತು ರೋಗಕಾರಕ ಪರಾವಲಂಬಿ ಜೀವಿಗಳನ್ನು ಹುಡುಕಿ, ಹೆಕ್ಕಿ ತಿಂದುಹಾಕುತ್ತವೆ; ಗಾಯ ಮತ್ತು ಹುಣ್ಣುಗಳನ್ನು ಸ್ವಚ್ಛಗೊಳಿಸುತ್ತವೆ. ಅಷ್ಟೇ ಅಲ್ಲದೆ, ಶಾರ್ಕ್‌ನ ಬಾಯೊಳಕ್ಕೂ ಹೋಗಿ ಹತ್ತಾರು ದಂತ ಪಂಕ್ತಿಗಳ, ನೂರಾರು ಹಲ್ಲುಗಳ ನಡುವೆ ಸಿಕ್ಕಿಬಿದ್ದ ಆಹಾರ ತುಣುಕುಗಳನ್ನೆಲ್ಲ ಹೊರತೆಗೆಯುತ್ತವೆ. ಇದನ್ನೆಲ್ಲ ಸಹಜವಾಗಿಯೇ ಅರಿತಿರುವ ಶಾರ್ಕ್‌ಗಳು ಆ ಕಾರಣದಿಂದಲೇ ಈ ಮತ್ಸ್ಯಗಳನ್ನು ಮಾತ್ರ ಹಿಡಿಯದೆ, ತಿನ್ನದೆ, ದೂರಕ್ಕೂ ತಳ್ಳದೆ ಸುಮ್ಮನಿರುತ್ತವೆ.

ಈ ಉಪಕಾರಗಳಿಗೆ ಪ್ರತಿಯಾಗಿ ಶಾರ್ಕ್‌ಗಳು ಬೇಟೆಯಾಡುವ ಪ್ರಾಣಿಗಳ ದೇಹದ ತುಣುಕುಗಳು ಈ ಮತ್ಸ್ಯಗಳಿಗೆ ಆಹಾರವಾಗಿ ಒದಗುತ್ತವೆ. ಅಷ್ಟೇ ಅಲ್ಲದೆ, ಶಾರ್ಕ್‌ಗಳ ಸಾಮೀಪ್ಯದಿಂದಾಗಿ ಈ ಮೀನುಗಳು ಶತ್ರು ಭಯವೇ ಇಲ್ಲದೆ ಸುರಕ್ಷಿತವಾಗಿರುತ್ತವೆ ಕೂಡ!

■ ಎನ್. ವಾಸುದೇವ್